ಓದುವುದು ಇಂಗ್ಲಿಷ್ ಪತ್ರಿಕೆಗಳನ್ನು, ನಮ್ಮ ಮಕ್ಕಳಿಗೆ ಕೊಡಿಸುವುದು ಸಂಸ್ಕೃತವನ್ನ; ನೋಡುವುದು. ಹಿಂದೀ ಸಿನಿಮಾಗಳನ್ನ, ಕನ್ನಡದ ಬಗೆಗೆ ನಮ್ಮ ಪ್ರೀತಿಯಿಲ್ಲ; ಆದರವಿಲ್ಲ. ಕನ್ನಡ ತುಟಿ ಸಹಾನುಭೂತಿಯ ವಸ್ತು. ಭಾಷೆಯನ್ನು ಬಳಸುವ ಕಡೆಯಲ್ಲೆಲ್ಲ—ಅನಿವಾರ್ಯ ಸಂದರ್ಭಗಳನ್ನು ಬಿಟ್ಟು—ಕನ್ನಡವನ್ನೇ ಬಳಸುತ್ತೇನೆಂದು ಪ್ರತಿಯೊಬ್ಬ ಕನ್ನಡಿಗನೂ ಪಣತೊಟ್ಟು ನಡೆದಾಗ ಮಾತ್ರ ಕನ್ನಡ ಉಳಿಯುತ್ತದೆ, ಬೆಳೆಯುತ್ತದೆ. ಭಾಷೆಗೆ ಪ್ರತಿಷ್ಠೆ ಬರುವುದು ಅದರ ಬಳಕೆಯಿಂದ ಮಾತ್ರ. ಎಲ್ಲ ಸಂದರ್ಭಗಳಲ್ಲೂ ಕನ್ನಡ ತಲೆ ಎತ್ತಿನಿಲ್ಲಬೇಕು. ಇಲ್ಲದಿದ್ದರೆ ಅದಕ್ಕೆ ಘನತೆ ಲಭಿಸುವುದಿಲ್ಲ.

**'ನಾವು ಓದುವುದು ಇಂಗ್ಲಿಷ್ ಪತ್ರಿಕೆಗಳನ್ನ; ನಮ್ಮ ಮಕ್ಕಳಿಗೆ ಕೊಡಿಸುವುದು ಸಂಸ್ಕೃತವನ್ನ; ನೋಡುವುದು ಹಿಂದೀ ಸಿನಿಮಾಗಳನ್ನ, ಕನ್ನಡದ ಬಗೆಗೆ ನಮಗೆ ನಮ್ಮ ಪ್ರೀತಿಯಿಲ್ಲ; ಆದರವಿಲ್ಲ'**

ಒಂದು ರೀತಿಯಲ್ಲಿ ಕನ್ನಡದ ಪ್ರಶ್ನೆ ವಿಷವರ್ತುಲದಲ್ಲಿ ತೊಳಲುತ್ತಿದೆ. ಆಡಳಿತದಲ್ಲಿ ಕನ್ನಡ ಕಡ್ಡಾಯವಾಗದೆ, ಶಿಕ್ಷಣದಲ್ಲಿ ಕನ್ನಡ ಬರುವುದಿಲ್ಲ; ಶಿಕ್ಷಣದಲ್ಲಿ ಕನ್ನಡ ನೆಲೆಯಾಗದೆ, ಜನ ಜೀವನದಲ್ಲಿ ಕನ್ನಡ ಉಳಿಯುವುದಿಲ್ಲ; ಜನಜೀವನದಲ್ಲಿ ಕನ್ನಡ ತುಂಬದೆ, ಆಡಳಿತದಲ್ಲಿ ಅದು ಬರುವುದಿಲ್ಲ. ಯಾವುದು ಮೊದಲು ಎಂಬುದು ಸಮಸ್ಯೆ! ಎಲ್ಲವೂ ಏಕಕಾಲದಲ್ಲಿ ನಡೆಯಬೇಕೆಂಬುದೇ ಕರ್ನಾಟಕ ರೂಪಗೊಂಡ ಉದ್ದೇಶ. ಶಿಕ್ಷಣ, ಆಡಳಿತ, ಜನಜೀವನಗಳನ್ನು ಕನ್ನಡ ತುಂಬಿಕೊಳ್ಳಬೇಕು. ಆಗ ಮಾತ್ರ ಮೂಲಉದ್ದೇಶ ಸಾರ್ಥಕವಾಗುತ್ತದೆ. ಐತಿಹಾಸಿಕವಾದ ಕಾರಣಗಳೇನೇ ಇರಲಿ, ನಮ್ಮ ಭಾಷೆ ಸಂಸ್ಕೃತಿಗಳ ಬಗೆಗೆ ಅಭಿಮಾನ ಶೂನ್ಯರಾದ ಜನ ಭಾರತದಲ್ಲಿ ಬೇರೆ ಯಾರೂ ಇಲ್ಲ. ಕನ್ನಡಿಗರಿಗಿಂತ ಅಸಹಾಯಕರಾದ ಜನ ಇದ್ದಾರು; ಅಭಿಮಾನ ಶೂನ್ಯರು ಮಾತ್ರ ಖಂಡಿತ ಇಲ್ಲ.

ಕರ್ನಾಟಕ ಒಂದು ರಾಜ್ಯವಾಗಿ ಕಾಲುಶತಮಾನವಾಗಿದೆ. ಈ ಅವಧಿಯಲ್ಲಿ ಕನ್ನಡಿಗರು ಹಲವು ಕ್ಷೇತ್ರಗಳಲ್ಲಿ ಗಣನೀಯವಾಗಿ ಕೆಲಸ ಮಾಡಿತೋರಿಸಿದ್ದಾರೆ; ತಮ್ಮ ಸೃಜನ ಕ್ರಿಯೆಯಿಂದ ರಾಷ್ಟ್ರೀಯ ಗಮನವನ್ನೇ ಸೆಳೆದಿದ್ದಾರೆ; ರಾಜಕೀಯದಲ್ಲಿಯೂ ಕೆಲವು ವೈಶಿಷ್ಟ್ಯಗಳನ್ನು ಮೆರೆದಿದ್ದಾರೆ. ಆದರೆ ತಾವು ಕನ್ನಡಿಗರು ಎಂಬ ಸಮಷ್ಟಿ ಪ್ರಜ್ಞೆಯನ್ನು ಅವರು ತೋರಿಸಿಲ್ಲ. ಕರ್ನಾಟಕದಲ್ಲಿ ಕನ್ನಡವನ್ನು ಸ್ಥಾಪಿಸಲು ಕನ್ನಡಿಗರನ್ನು ನೆಲೆಯಾಗಿಸಲು ಅವರು ವಿಫಲರಾಗಿದ್ದಾರೆ. ಕನ್ನಡವಿಲ್ಲದ ಕರ್ನಾಟಕ ಅರ್ಥವಿಲ್ಲದ್ದು. ಎಲ್ಲಿಯವರೆಗೆ ಕರ್ನಾಟಕದಲ್ಲಿ ಕನ್ನಡ ಸಿಂಹಾಸನದ, ಪದವಿದಾನದ, ದೈನಂದಿನ ಬಳಕೆಯ ಭಾಷೆ ಆಗಿ ಮೆರೆಯುವುದಿಲ್ಲವೋ ಅಲ್ಲಿಯವರೆಗೆ ಕರ್ನಾಟಕ ನನಸಾಗದ ಕನಸು. ಎಲ್ಲಿಯವರೆಗೆ ಕರ್ನಾಟಕದಲ್ಲಿ ಕನ್ನಡಿಗರಿಗೆ ಆದ್ಯತೆ ಇರುವುದಿಲ್ಲವೋ ಅಲ್ಲಿಯವರೆಗೆ ಕರ್ನಾಟಕ ದೇವರಿಲ್ಲದ ಗುಡಿ. ಕಾಲುಶತಮಾನವಾದರೂ ಅಷ್ಟೇ; ಅರ್ಧಶತಮಾನವಾದರೂ ಅಷ್ಟೆ. ಬೆಳ್ಳಿಗಂಟೆ ಬಾರಿಸಿದರೂ, ಒಂದೇ, ಚಿನ್ನದ ಬಾರಿಸಿದರೂ ಒಂದೇ — ಎಲ್ಲ ಒಡಕಲು, ಕೀರಲು!